# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂ.ವೈ.ಎಸ್.–1287/2016/ಡಿಆರ್‌ಇ–5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು–560 001,
ದಿನಾಂಕ:7.4.2017.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ಶ್ರೀ.ಹೆಚ್.ಎಂ.ಮಂಜುನಾಥ್, ಬಿನ್ ಲೇಟ್ ಹೆಚ್.ಬಿ.ಮೋಕ್ಷರಾಜು, ಹಸಡೆ ಗ್ರಾಮ, ಕಸಬಾ ಹೋಬಳಿ, ಹಲಸುಲಿಗೆ ಅಂಚೆ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ ಅವರು ಸಲ್ಲಿಸಿದ ದೂರಿನ ಕುರಿತು.

****

ಶ್ರೀ.ಹೆಚ್.ಎಂ.ಮಂಜುನಾಥ್, ಬಿನ್ ಲೇಟ್ ಹೆಚ್.ಬಿ.ಮೋಕ್ಷರಾಜು, ಹಸಡೆ ಗ್ರಾಮ, ಕಸಬಾ ಹೋಬಳಿ, ಹಲಸುಲಿಗೆ ಅಂಚೆ, ಸಕಲೇಶಪುರ ತಾಲ್ಲೂಕು, ಹಾಸನ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ), ಇವರು ಶ್ರೀ.ಹನುಮೇಗೌಡ.ಬಿ.ಆರ್., ಸಹಾಯಕ ಭೂ ಮಾಪನಾಧಿಕಾರಿ, ಸರ್ವೆ ಇಲಾಖೆ, ಸಕಲೇಶಪುರ, ಹಾಸನ ಜಿಲ್ಲೆ, ಮತ್ತು ಶ್ರೀ.ಇ.ಎಂ.ಮೋಹನ್, ಸರ್ವೆಯರ್, ಸರ್ವೆ ಇಲಾಖೆ, ಸಕಲೇಶಪುರ, ಹಾಸನ ಜಿಲ್ಲೆ, (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಸಲ್ಲಿಸಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.9ರಡಿಯಲ್ಲಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. ದೂರುದಾರರು ತಮ್ಮ ದೂರಿನಲ್ಲಿ, ಎದುರುದಾರರು ನನ್ನ ತಾಯಿಯೊಂದಿಗೆ ಸೇರಿಕೊಂಡು ಅಕ್ರಮವಾಗಿ ಜಮೀನಿನ ಪೋಡಿ ಮಾಡಿ ಸ್ಕೆಚ್ ಕೊಟ್ಟಿದ್ದಾರೆ. ನನ್ನ ಸಹಿಯನ್ನು ಫೋರ್ಜರಿ ಮಾಡಿದ್ದಾರೆ. ಸ. ನಂ: 51ರಲ್ಲಿ ನನ್ನ ಭಾಗಕ್ಕೆ 3ಎ., 19ಗು., ಸಕಲೇಶಪುರದ ಸಿವಿಲ್ ಜಡ್ಜ್ ಕೋರ್ಟಿನಲ್ಲಿ ರಾಜಿ ಡಿಕ್ರಿಯಂತೆ ಬಂದಿದೆ ಅದನ್ನು ಪೋಡಿ ಮಾಡುವಾಗ ಅಕ್ರಮ ಎಸಗಿದ್ದಾರೆ ಅಂತ ದೂರು ಸಲ್ಲಿಸಿದ್ದಾರೆ.

3) ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಅಸಳೆ ಗ್ರಾಮದ ಸ. ನಂ: 51ರಲ್ಲಿ ಪೋಡಿ ಮಾಡಲು ದೂರುದಾರರ ತಾಯಿ ಅರ್ಜಿ ಕೊಟ್ಟಿದ್ದರು ನಾನು 4 ತಾಲ್ಲೂಕುಗಳ ಭೂ ಮಾಪನ ಶಾಖೆಯ ಮೇಲುಸ್ತುವಾರಿ ಅಧಿಕಾರಿಯಾಗಿದ್ದೇನೆ. ಪರವಾನಗಿ ಭೂ ಮಾಪಕರಾದ ಇವರಿಗೆ ತಂತ್ರಾಂಶದಲ್ಲಿ ಅರ್ಜಿ ಹಂಚಿಕೆಯಾಗಿದೆ ಅವರು ವರದಿ ಸಲ್ಲಿಸಿದ ನಂತರ ಭೂ ಮಾಪಕರು ಮೊದಲನೆ ಹಂತದಲ್ಲಿ ತಪಾಸಣಾ ಭೂ ಮಾಪಕರು 2ನೇ ಹಂತದಲ್ಲಿ ಮತ್ತು ಪರಿಯಾವೀಕ್ಷಕರು ಅಂತಿಮ ಅನುಮೋದನೆಯನ್ನು ಕೊಟ್ಟ ನಂತರ ನಾನು ದಾಖಲೆಗಳಿಗೆ ಲಾಗಿನ್ ಕೊಟ್ಟಿದ್ದೇನೆ. ನನ್ನ ಪೋರ್ಜರಿ ಸಹಿಯಾಗಿದೆ ಎನ್ನುವ ವಿಷಯನ್ನು ದೂರುದಾರರು ನನ್ನ ಗಮನಕ್ಕೆ ತಂದಿಲ್ಲ ಈಗ ನನ್ನ ಗಮನಕ್ಕೆ ಬಂದಿರುವುದರಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಆದ್ದರಿಂದ ದೂರು ಅರ್ಜಿ ಕೈಬಿಡುವಂತೆ ಕೋರಿಕೊಂಡಿದ್ದಾರೆ.

4) 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಅರ್ಜಿದಾರರು ಮಂಜುನಾಥ ನನ್ನ ಮಗನಾಗಿದ್ದಾನೆ ಅವರಿಗೆ ಅಳತೆ ಬಗ್ಗೆ ದಿನಾಂಕ ತಿಳಿಸುತ್ತೇನೆ ನೋಟೀಸಿಗೆ ಸಹಿ ಹಾಕಿಸುತ್ತೇನೆಂದು ನೋಟೀಸಿಗೆ ಸಹಿ ಹಾಕಿಸಿರುತ್ತಾರೆ ಕೋರ್ಟ್ ಡಿಕ್ರಿಯ ಪ್ರಕಾರ ವಿದ್ಯಾರವರು ಅನುಭವದಲ್ಲಿದ್ದ ಪ್ರದೇಶವನ್ನು ಅಳತೆ ಮಾಡಿ ಸ್ಕೆಚ್ ತಯಾರಿಸಿ ಕೊಟ್ಟಿದ್ದೇನೆ. ಅರ್ಜಿದಾರರ ಮಗ ಹಾಜರಿರಲಿಲ್ಲ. ಈ ಬಗ್ಗೆ ವಿಚಾರಿಸಿದಾಗ ವಿದ್ಯಾಮೋಕ್ಷರಾಜ್ ರವರು ನನ್ನ ಮಗನಿಗೆ ಯಾವುದೇ ತಕರಾರು ಇಲ್ಲ ಕೋರ್ಟ್ ಡಿಕ್ರಿಯಾಗಿದೆ ಆದ್ದರಿಂದ ನನ್ನ ಮಗನ ಸಹಿ ಹಾಕಿಸಿಕೊಡುತ್ತೇನೆ ಅಂತ ಹೇಳಿಕೆಯನ್ನು ತೆಗೆದುಕೊಂಡು ಹೋಗಿದ್ದಾರೆ. ನಂತರ ಅವುಗಳನ್ನು ನನಗೆ ಕೊಟ್ಟಿದ್ದಾರೆ. ಹದ್ದು ಬಸ್ತು ಮಾಡುವ ಅಧಿಕಾರ ನನಗೆ ಇಲ್ಲ ನಾನು ಪರವಾನಿಗೆ ಭೂ ಮಾಪಕನಾಗಿದ್ದೇನೆ. ಆದ್ದರಿಂದ ದೂರನ್ನು ಮುಕ್ತಾಯಗೊಳಿಸಲು ಹೇಳಿದ್ದಾರೆ.

5. ಈ ಆಕ್ಷೇಪಣೆಗಳ ಮೇಲೆ ದೂರುದಾರರ ಪ್ರತ್ಯುತ್ತರ ಕೇಳಲಾಗಿ ನಮ್ಮ ತಾಯಿ ಯಾವುದೇ ಸಹಿಯನ್ನು ತೆಗೆದುಕೊಂಡಿಲ್ಲ 2ನೇ ಎದುರುದಾರರು ಸ್ವತಃ ಅರ್ಜಿದಾರರ ಕೈಯಲ್ಲಿ ಎಲ್ಲಾ ದಾಖಲೆಗಳನ್ನು ಕೊಟ್ಟು ಮಗನ ಸಹಿ ತೆಗೆದುಕೊಂಡು ಬರುವಂತೆ ಹೇಳಿರುವುದನ್ನು ಒಪ್ಪಿಕೊಂಡಿದ್ದಾರೆ. ಆದ್ದರಿಂದ ಅವರ ವಿರುದ್ಧ ಕ್ರಮ ಕೈಗೊಳ್ಳಲು ಕೇಳಿಕೊಂಡಿದ್ದಾರೆ.

6. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಅಸಲು ದಾವೆ ನಂ: 36/12ರಲ್ಲಿ ರಾಜಿ ಅರ್ಜಿಯ ಪ್ರಕಾರ ಒಂದು ಅಂತಿಮ ಡಿಕ್ರಿಯನ್ನು ನ್ಯಾಯಾಲಯವು ಕೊಟ್ಟಿದೆ ಇದರಲ್ಲಿ ರಾಜಿ ಅರ್ಜಿಯ ಪ್ರಕಾರ ಸ. ನಂ: 51ರಲ್ಲಿ ವಾದಿ ಹೆಚ್. ಎನ್. ಮಂಜುನಾಥ ಮತ್ತು 1ನೇ ಪ್ರತಿವಾದಿ ಇವರ ಭಾಗಕ್ಕೆ ಬಂದಿರುವ ಜಮೀನುಗಳ ಚೆಕ್ಕುಬಂದಿಯನ್ನು ಬರೆಯಲಾಗಿದೆ ಅಲ್ಲದೆ ಕಚ್ಚಾ ನಕಾಶೆಯನ್ನು ಸಹ ಲಗತ್ತಿಸಲಾಗಿದೆ. ಈ ಕರಡು ನಕ್ಷೆಯು ಅಂದಾಜು ನಕ್ಷೆಯಾಗಿದೆ. ದೂರುದಾರರಾಗಲಿ ಎದುರುದಾರರಾಗಲೀ ಸದರಿ ಕರಡು ನಕ್ಷೆಯ ಪ್ರತಿಯನ್ನು ಸಲ್ಲಿಸಿಲ್ಲ ಅಲ್ಲದೆ ಸಿವಿಲ್ ನ್ಯಾಯಾಲಯದ ಅಂತಿಮ ಡಿಕ್ರಿಯ ಸ್ಟ್ಯಾಂಪ್ ಪೇಪರ್ ಅನ್ನು 1ನೇ ಪ್ರತಿವಾದಿ ಮಾತ್ರ ಕೊಟ್ಟಿದ್ದಾರೆ. ದೂರುದಾರರು ಸಹ 500/- ಸ್ಟ್ಯಾಂಪ್ ಪೇಪರ್‌ಅನ್ನು ಕೊಟ್ಟು ತನ್ನ ಪರವಾಗಿ ನ್ಯಾಯಾಲಯದ ಅಂತಿಮ ಡಿಕ್ರಿ ಪಡೆಯಬೇಕಾಗುತ್ತದೆ. ಆದರೆ ದೂರುದಾರರು ಈ ನಿಯಮವನ್ನು ಪಾಲಿಸಿಲ್ಲ ವಿದ್ಯಾ ಮೋಕ್ಷರಾಜ್ ಎನ್ನುವವರು ಸರ್ವೆ ಸಲುವಾಗಿ ಅರ್ಜಿ ಸಲ್ಲಿಸಿದಾಗ ತತಕಾಲ್ ಪೋಡಿ ಮಾಡಲಾಗಿದೆ ಆದರೆ 2ನೇ ಎದುರುದಾರರು ನಾನು ಕೇವಲ ಪರವಾನಗಿ ಭೂ ಮಾಪಕನಾಗಿದ್ದೇನೆ. ಬಾಜುದಾರರಿಗೆ ನೋಟೀಸು ಕೊಟ್ಟು ಹದ್ದುಬಸ್ತು ಮಾಡುವ ಅಧಿಕಾರ ನನಗೆ ಇರುವುದಿಲ್ಲ ಅಂತ ಹೇಳುವುದರ ಜೊತೆಗೆ ದೂರುದಾರರ ತಾಯಿಗೆ ಅವರ ಮಗನ ನೋಟೀಸನ್ನು ಸಹ ಕೊಟ್ಟು, ಅವರ ಮಗನದು ಎನ್ನಲಾದ ಹೇಳಿಕೆ ಪ್ರತಿಯನ್ನು ಸಹ ಕೊಟ್ಟು ಸಹಿ ಮಾಡಿಸಿ ತರುವಂತೆ ಹೇಳಿ ಕರ್ತವ್ಯಲೋಪವೆಸಗಿದ್ದಾರೆ ಒಬ್ಬ ವ್ಯಕ್ತಿಯ ನೋಟೀಸನ್ನು ಇನ್ನೊಬ್ಬರಿಗೆ ಕೊಟ್ಟು ಸಹಿ ಹಾಕಿಸಿಕೊಂಡು ಬರುವಂತೆ ಹೇಳಲು ಬರುವುದಿಲ್ಲ ಅಲ್ಲದೆ ಸರ್ಕಾರಕ್ಕೆ ಬರೆದಿರುವ ಹೇಳಿಕೆಯಲ್ಲಿ ಬಹುವಚನವನ್ನು ಬಳಸಿದ್ದಿ ನಾವುಗಳೆಲ್ಲರೂ ಹಾಜರಿದ್ದು, ನಾವುಗಳು ತೋರಿಸಿದ ಅನುಭವದಂತೆ ಪೋಡು ಮಾಡಲಾಗಿದೆ ಅಂತ ಬರೆದಿರುವ ಹೇಳಿಕೆಯನ್ನು ಸಹ ದೂರುದಾರರ ತಾಯಿಯ ಕೈಯಲ್ಲಿ ಕೊಟ್ಟಿದ್ದೇನೆ ಅಂತ 2ನೇ ಎದುರುದಾರರ ಹೇಳಿದ್ದು ಇದು ನೇರವಾದ ಕರ್ತವ್ಯಲೋಪವಾಗಿದೆ. ಪರವಾನಗಿ ಭೂ ಮಾಪಕರ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳಲು 1ನೇ ಎದುರುದಾರರಿಗೆ ಸೂಕ್ತ ನಿರ್ದೇಶನವನ್ನು ಕೊಡಬಹುದು ಮತ್ತು ದೂರುದಾರರು ತಮ್ಮ ಸಹಿ ಫೋರ್ಜರಿಯಾಗಿದೆ ಎಂದು ಹೇಳುತ್ತಿರುವುದರಿಂದ 1ನೇ ಎದುರುದಾರರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ

ಅಧಿಕಾರದಡಿಯಲ್ಲಿ, ಎದುರುದಾರರಿಗೆ ನಿರ್ದೇಶನ ನೀಡಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.